# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ,
# ಪಾಂಡವಪುರ

## ಸಿ.ಸಿ.ಸಂಃ 410/2022

ಪಾಂಡವಪುರ ಠಾಣಾ ಪೋಲಿಸರು ಫಿರ್ಯಾದಿದಾರರು

- ವಿರುದ್ಧ -

ಲಿಂಗರಾಜು ಆರೋಪಿತರು
ಮತ್ತು ಇತರರು

## <u>ದೋಷಾರೋಪಣೆ</u>

**ಶ್ರೀ ಕಿಶೋರ್ ಕುಮಾರ್ ಕೆ.ಎನ್., ಬಿ.ಎ.ಎಲ್., ಎಲ್.ಎಲ್.ಬಿ. ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಪಾಂಡವಪುರ ಆದ ನಾನು, ಆರೋಪಿತರಾದಃ-**

1. ಲಿಂಗರಾಜು (42)
   ಬಿನ್ ಜಯರಾಮು,

2. ದೇವರಾಜು (36)
   ಬಿನ್ ಜಯರಾಮು,

3. ಪ್ರಕಾಶ (47)
   ಬಿನ್ ನಿಂಗೇಗೌಡ,

4. ಧರ್ಮ (41)
   ಬಿನ್ ಲೇಃ ನಿಂಗರಾಜು,

5. ಶಿಲ್ಪ (31)
   ಕೋಂಃ ಧರ್ಮ,

ಎಲ್ಲರೂ ವಾಸಃ ದೊಡ್ಡಬ್ಯಾಡರಹಳ್ಳಿ ಗ್ರಾಮ,
ಪಾಂಡವಪುರ ತಾಃ ಮಂಡ್ಯ.

ನಿಮ್ಮ ಮೇಲೆ ಹೊರಿಸುವ ಆರೋಪಣೆ ಏನೆಂದರೆಃ-

**ಮೊದಲನೆಯದಾಗಿಃ** 1 ರಿಂದ 5 ನೇ ಆರೋಪಿಗಳಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಪಾಂಡವಪುರ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡಬ್ಯಾಡರಹಳ್ಳಿ ನವಗ್ರಾಮ ಬಡವಣೆಯಲ್ಲಿರುವ ಗ್ರಾಮ ಪಂಚಾಯಿತಿಗೆ ಸಂಬಂದಿಸಿದ ಸರ್ವೆ ನಂ.57 ರ ಜಮೀನಿನಲ್ಲಿರುವ ಖಾಲಿ ಜಾಗದಲ್ಲಿ ಚಾಸಾ-1 ರವರು ಸರ್ವಜನಿಕರಿಗೆ ಕುಡಿಯುವ ನೀರಿನ ಮೇಜರ್ ಟ್ಯಾಂಕ್ ನಿರ್ಮಾಣ ಮಾಡಲು ಪ್ರಾರಂಭಸಿದಾಗ ಈ ಸ್ಥಳದ ಬಾಜು ಜಮೀನುದಾರರಾದ ಆರೋಪಿ 1, 2 ರವರೊಂದಿಗೆ ಆರೋಪಿ 3 ರವರು ಸೇರಿಕೊಂಡು ಜಮೀನಿನ ಹದ್ದು ಬಸ್‌ತ್ ವಿಚಾರದಲ್ಲಿ ಅಡಚಣೆ ಮಾಡಿದ್ದು, ದಿನಾಂಕಃ 16.09.2021 ರಂದು ಚಾಸಾ-1 ರವರು ತಹಸೀಲ್ದಾರ್ ಪಾಂಡವಪುರ ತಾಲ್ಲೂಕು, ತಾಲ್ಲೂಕು ಕಾರ್ಯನಿರ್ವಾಹಣಾಧಿಕಾರಿಗಳ ಸಮಕ್ಷಮದಲ್ಲಿ ತಾಲ್ಲಕೂಕು ಭೂಮಾಪಕರು ದೊಡ್ಡಬ್ಯಾಡರಹಳ್ಳಿ ಗ್ರಾಮದ ಸರ್ವೆ ನಂ.56 ಮತ್ತು 57 ರ ಜಮೀನುಗಳನ್ನು ಅಳತೆ ಮಾಡಿ ಹದ್ದು ಬಸ್ತ್ ಕಲ್ಲುಗಳನ್ನು ನಡೆಸಿದ್ದು, ಆ ಸಮಯದಲ್ಲಿ ಆರೋಪಿ 1 ರಿಂದ 3 ರವರು ಹದ್ದು ಬಸ್ತ್ ಕಲ್ಲುಗಳನ್ನು ನೆಡಲು ವಿರೋಧ ವ್ಯೆಕ್ತಪಡಿಸಿರುತ್ತಾರೆ, ನಂತರ ಅದೇ ದಿನ ದಿನಾಂಕ 16.09.2021 ರಂದು ರಾತ್ರಿ ಸುಮಾರು 8.00 ಗಂಟೆ ಸಮಯಕ್ಕೆ ಆರೋಪಿ 1 ರಿಂದ 3 ರವರುಗಳು ಸಮಾನ ಉದ್ದೇಶದಿಂದ ಮಾನ್ಯ ತಹಸೀಲ್ದಾರ್ ಪಾಂಡವಪುರ ತಾಲ್ಲೂಕು ರವರು ನೆಡಿಸಿದ್ದ ಜಮೀನಿನ ಹದ್ದು ಬಸ್‌ತ್ ಗುರುತು ಕಲ್ಲುಗಳನ್ನು ಕಿತ್ತು ಹಾಕಿರುತ್ತೀರಿ, **ಆ ಕಾರಣ ಆರೋಪಿಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ 434 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.**

**ಎರಡನೆಯದಾಗಿಃ** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 5 ನೇ ಆರೋಪಿಗಳಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಆರೋಪಿ 3 ರಿಂದ 5 ರವರುಗಳು ದಿನಾಂಕಃ 17.09.2021 ರಂದು ಮಧ್ಯಾಹ್ನ 12.00 ಗಂಟೆ ಸಮಯದಲ್ಲಿ ದೊಡ್ಡಬ್ಯಾಡರಹಳ್ಳಿ ಗ್ರಾಮ ಪಂಚಾಯಿತಿ ಕಛೇರಿಗೆ ಹೋಗಿ ಕಛೇರಿಯಲ್ಲಿ ಸರ್ಕಾರಿ ಕರ್ತವ್ಯ ನಿರ್ವಹಿಸುತ್ತಿದ್ದ ಚಾಸಾ-2 ರವರೊಂದಿಗೆ ಜಗಳ ತೆಗೆದು ಸರ್ಕಾರಿ ಕರ್ತವ್ಯ ನಿರ್ವಹಿಸದಂತೆ ಚಾಸಾ-2 ರವರಿಗೆ ಅಡಚಣೆ ಮಾಡಿ, ಮಧ್ಯಾಹ್ನ 12.00 ರಿಂದ 1.00 ಗಂಟೆ ವರೆಗೆ ಗ್ರಾಮ ಪಂಚಾಯಿತಿ ಕಛೇರಿಯ ಮುಂದಿನ ಕಾಂಪೌಂಡ್ ಗೇಟ್ ಹಾಕಿ ಚಾಸಾ-2 ರವರಿಗೆ ಸರ್ಕಾರಿ ಕರ್ತವ್ಯ ನಿರ್ವಹಿಸಲು

ಅಡಚಣೆ ಉಂಟು ಮಾಡಿರುತ್ತೀರಿ, **ಆ ಕಾರಣ ಆರೋಪಿಗಳಾದ ನೀವು ಭಾರತೀಯ ದಂಡ ಸಂಹಿತೆ ಕಲಂ 342 ಸಹವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.**

**<u>ಕೊನೆಯದಾಗಿಃ</u>** ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, 1 ರಿಂದ 5 ನೇ ಆರೋಪಿಗಳಾದ ನೀವುಗಳು ಅಪರಾಧವನ್ನು ಎಸಗುವ ಸಮಾನ ಉದ್ದೇಶದಿಂದ, ಮದ್ಯಾಹ್ನ 12.00 ರಿಂದ 1.00 ಗಂಟೆ ವರೆಗೆ ಗ್ರಾಮ ಪಂಚಾಯಿತಿ ಕಛೇರಿಯ ಮುಂದಿನ ಕಾಂಪೌಂಡ್ ಗೇಟ್ ಹಾಕಿ ಚಾಸಾ-2 ರವರಿಗೆ ಸರ್ಕಾರಿ ಕರ್ತವ್ಯ ನಿರ್ವಹಿಸಲು ಅಡಚಣೆ ಉಂಟು ಮಾಡಿರುತ್ತೀರಿ. **ಆ ಕಾರಣ ಆರೋಪಿಯಾದ ನೀವು ಭಾರತೀಯ ದಂಡ ಸಂಹಿತೆ ಕಲಂ 353 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೆ ಮತ್ತು ಪರಿಮಿತಿಯೊಳಗೆ ಎಸಗಿರುತ್ತೀರಿ.**

ಪ್ರ.ನಂ.1ಃ ನೀವು ಈ ಮೇಲಿನ ಆರೋಪವನ್ನು ಓದಿ ಹೇಳಿದ್ದು ಅರ್ಥ ಮಾಡಿ ಕೊಂಡಿರುವಿರಾ?

ಉತ್ತರಃ

ಪ್ರ.ನಂ.1ಃ ನೀವು ಈ ಆರೋಪವನ್ನು ಒಪ್ಪಿಕೊಳ್ಳುವಿರಾ ಅಥವಾ ವಾದಿಸುವಿರಾ?

ಉತ್ತರಃ

ಆರೋಪಿಯನ್ನು ತೆರೆದ ನ್ಯಾಯಾಲಯದಲ್ಲಿ ವಿಚಾರಿಸಿದ ಬಳಿಕ ಆತನ ಹೇಳಿಕೆಯನ್ನು ಪಡೆದಿದ್ದು ಅದು ಅವರ ಸತ್ಯ ಹಾಗೂ ಸಂಪೂರ್ಣವಾದ ಹೇಳಿಕೆಯಾಗಿರುತ್ತದೆ ಎಂದು ಈ ಮೂಲಕ ದೃಢೀಕರಿಸುತ್ತೇನೆ.

**ದಿನಾಂಕಃ 21.11.2022** **ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,**
**ಸ್ಥಳಃ ಪಾಂಡವಪುರ** **ಪಾಂಡವಪುರ.**

**ಆರೋಪಿಯ ಸಹಿಃ**